ಪೊಲೀಸರ ಬೇಟೆಯಿರೋದು ಲಹರಿಯ ಜೊತೆಗೆ ಓಡಾಡಿಕೊಂಡಿದ್ದ ಯುವಕನ ಮೇಲೆ! ಲಹರಿ ಯಾರ ಜೊತೆಗೆ ಓಡಾಡುತ್ತಿದ್ದಳೆನ್ನುವುದು ಇಲಾಖೆಗೆ ಇನ್ನೂ ಅಸ್ಪಷ್ಟ!

ಇಲಾಖೆ ಘೋಷಿಸಿದ ಬಹುಮಾನದ ಆಮಿಷಕ್ಕೆ ಬಲಿ ಬಿದ್ದು ಸುಲಭದಲ್ಲಿ ಹಣ ಗಳಿಸುವ ದಂಧೆಗೆ ಇಳಿದ ಪಾಂಬುವಿಗೆ ಈಗ ಅದೇ ಒಂದು ಉರುಳಾಗಿ ಕಾಡುತ್ತಿದೆ. ಇತ್ತ ಹಿತೇಶನನ್ನು ನೇರವಾಗಿ ಪೊಲೀಸರಿಗೆ ಒಪ್ಪಿಸುವಂತಿಲ್ಲ; ಅತ್ತ ಇನ್ಸ್‌ಪೆಕ್ಟರ್ ರಾಜಧಾನಿಯನ್ನು ಎದುರು ಹಾಕಿಕೊಳ್ಳುವಂತಿಲ್ಲ. ಒಂದೇ ಸೂಜಿಯಿಂದ ಎರಡು ಮುಳ್ಳುಗಳನ್ನು ಸುಲಭದಲ್ಲಿ ಹೊರಗೆ ತೆಗೆಯಬೇಕು, ಹೇಗೆ? ಆಲೋಚಿಸುತ್ತಲೇ ಇದ್ದ.

'ಹಿತೇಶ, ಆತುರ ಪಡ್ಬೇಡ. ಪ್ರತೀಬಾರಿಯೂ ನನ್ನನ್ನು ನೀನು ಸಂದೇಹಿಸ್ತೀಯಾ. ನಾನು ನಿನ್ನನ್ನು ಪೊಲೀಸರಿಗೆ ಒಪ್ಪಿಸುವವನಾಗಿದ್ದರೆ ಇಲ್ಲಿಯವರೆಗೂ ಕಾಯ್ತಾ ಇರ್ಲಿಲ್ಲ. ನಿನ್ನ ನಾನು ಎಚ್ಚರಿಸೋದು ಇಷ್ಟಕ್ಕೆ. ಈ ಮರಳು ದಿಣ್ಣೆ ನಿನಗೆ ಅಪಾಯದ ತಾಣ. ಒಂಟಿಯಾಗಿ ಇಲ್ಲಿ ಅಲೆದಾಡೋದು ಸಲ್ಲುವಲ್ಲ. ಅದನ್ನು ನೀನು ನೆನಪಿನಲ್ಲಿಟ್ಟುಕೊಂಡರೆ ಸಾಕು' ಮೃದುವಾಗಿತ್ತು ಹಿತೈಷಿಯ ಮಾತುಗಳು.

ಹಿತೇಶ ಅವನ ಜೊತೆಗೆ ಹೆಜ್ಜೆ ಮುಂದುವರಿಸಿದ.

'ಪಾಂಬು, ಬಾಯಲ್ಲಿ ಹೇಳಿದಷ್ಟು ಸುಲಭವಲ್ಲ ಈ ಕೆಲಸ. ಲಹರಿಯ ಕಣ್ಮರೆಯಿಂದ ಕಂಗೆಟ್ಟಿದ್ದೇನೆ. ಅದು ನಿನಗೂ ಗೊತ್ತು'

'ಅದಕ್ಕೆ ನಿನ್ನ ಸಹಾಯಕ್ಕೆ ನಿಂತಿದ್ದೇನೆ. ನೀನು ಪೊಲೀಸ್ ಕಂಪ್ಲೆಂಟ್ ಕೊಟ್ಟು ಹಾಯಾಗಿರಬಹುದಿತ್ತು. ಇನ್ನು ಅದೂ ಅಸಾಧ್ಯ. ಲಹರಿಯ ಬೇಟೆಗೆ ಇಳಿದಿರುವ ಪೊಲೀಸ್ ಇಲಾಖೆ ನಿನ್ನನ್ನು ನೇರವಾಗಿ ಮುಗಿಸಿದರೂ ಯಾರೂ ನಿನ್ನನ್ನು ಕೇಳೋದಿಕ್ಕೆ ಬರೊಲ್ಲ, ನನ್ನನ್ನು ಹೊರತು ಪಡಿಸಿ'

ಹಿತೇಶ ಗಾಢವಾದ ಚಿಂತೆಗೆ ಬಿದ್ದ.

'ಪೊಲೀಸರಿಗೆ ದೂರು ಕೊಡುವಷ್ಟು ಧೈರ್ಯ ನನ್ನಲಿರಲಿಲ್ಲ. ಲಹರಿಯ ಜೊತೆಗೆ ನಾನು ಸುತ್ತಾಡ್ತಾ ಇದ್ದಿದ್ದು ಯಾರಿಗೂ ಗೊತ್ತಿಲ್ಲ. ಇಷ್ಟಕ್ಕೂ ಅವಳ ಕಾರಿನ ಡ್ರೈವರ್‌ಗೂ ಗೊತ್ತಿಲ್ಲ. ಅವಳು ನಮ್ಮ ಪ್ರೀತೀನ ಅಷ್ಟು ಜೋಪಾನವಾಗಿ ಕಾಪಾಡಿದ್ಲು'

'ಆ ಅಗಾಧವಾದ ಪ್ರೀತಿನೇ ಈಗ ನಿಂಗೆ ಮುಳುವಾಗಿರೋದು. ನೀನು ಒಮ್ಮೆಯೂ ಅವಳ ಜೊತೆಗೆ ಅವಳ ತಂದೆ ತಾಯಿಯನ್ನು ಭೇಟಿಯಾಗೋ ಧೈರ್ಯ ಮಾಡ್ಲಿಲ್ಲ. ಪ್ರೀತಿ ಮಾಡಬಾರದು ಮಾಡಿದರೆ ಯಾರಿಗೂ ಹೆದರಬಾರದು ಅನ್ನೋ ಮಾತಿದೆಯಲ್ಲ. ನಿನ್ನ ಪ್ರೀತಿನ ನಿಮ್ಮಿಬ್ಬರಲ್ಲಿಯೇ ಯಾಕೆ ಮುಚ್ಚಿಟ್ಟೆ?' ಹಿತೈಷಿಯ ಮಾತುಗಳು ನೂರಕ್ಕೆ ನೂರು ಸತ್ಯವೆನಿಸಿತು. ಪ್ರೇಮಿಯಾದವನು ಅದನ್ನು ತಿರಸ್ಕರಿಸಲಾರ.

'ಪ್ರೀತಿನ ಮುಚ್ಚಿಡೋದಿಕ್ಕೆ ಬಲವಾದ ಕಾರಣವೂ ಇತ್ತು, ಪಾಂಬು'

ಪಾಂಬು ಆಶ್ಚರ್ಯ ಚಕಿತನಾಗಿ ಹಿತೇಶನತ್ತ ನೋಡಿದ.

'ಏನು ಕಾರಣ? ಈ ಮರಳು ದಿಣ್ಣೆಯಲ್ಲಿ ನೀವು ಓಡಾಡುತ್ತಿದ್ದುದ್ದನ್ನು ನೋಡಿದ್ರೆ ಯಾರಿಗೂ ಹಾಗೆ ಅನಿಸ್ತಾನೆ ಇರ್ಲಿಲ್ಲ. ಜನುಮ ಜನುಮದ ಜೋಡಿ ನೀವು ಅನಿಸ್ತಿತ್ತು' ಸಹಜವಾದುದನ್ನು ನುಡಿದ.

'ಲಹರಿಗೆ ಓಡಾಟನೇ ತುಂಬಾ ಹಿತವಾಗಿತ್ತು. ಅವಳ ಸ್ವಚಂದ ಓಡಾಟಕ್ಕೆ ಒಂದು ಸ್ನೇಹ ಹಸ್ತ ಬೇಕಿತ್ತು. ಅದಕ್ಕಾಗಿ ಅವಳು ನನ್ನ ಪ್ರೀತಿಸ್ತಿದ್ಲು'

'ಅಂದ್ರೆ, ನಿಜವಾಗಿಯೂ ಅವಳಿಗೆ ನಿನ್ನ ಮೇಲೆ ಪ್ರೀತಿ ಇರ್ಲಿಲ್ಲಾಂತನಾ?'

'ಅಲ್ಲ, ಹಾಗಲ್ಲ. ಅವಳಿಗೆ ನನ್ನ ಮೇಲೆ ಪ್ರೀತಿ ಇತ್ತು. ಅವಳ ಪ್ರೀತಿನ ನಾನು ಗೆದ್ದೇ ಗೆಲ್ತೀನಿ ಅನ್ನೋ ದೃಷ್ಟಿಯಿಂದಲೇ ನನ್ನ ಅವಳ ಓಡಾಟ ಆರಂಭವಾದದ್ದು. ಆದರೆ ಆ ಓಡಾಟ ನಮ್ಮಿಬ್ಬರನ್ನು ಒಂದು ಮಾಡೋ ಬದಲು ಬೇರೆ ಬೇರೆ ಮಾಡು'

'ಹಾಗಾಗೋದಿಕ್ಕೆ ಏನು ಕಾರಣ?'

'ಕಾರಣ ಮಾತ್ರ ಅಸ್ಪಷ್ಟ. ಅದನ್ನೇ ಆಲೋಚಿಸ್ತಿದ್ದೇನೆ' ಹತಾಶೆಯಿಂದ ನುಡಿದವನ ಹೆಜ್ಜೆ ಭಾರವಾಗಿತ್ತು.

## ಮದುವಣಗಿತ್ತಿಯಂತೆ ಬಂದು ಮಾಯವಾದಳು!

'ಆ ದಿನ ಬೇಗನೆ ದಂಡೆ ಸೇರ್ತೇನೆಂತ ಭರವಸೆ ನೀಡಿದೋಳು, ಇಲ್ಲಿಗೆ ಬರೋವಾಗ ಹೊತ್ತು ಮೀರಿತ್ತು. ಅವಳಿಗಾಗಿ ಕಾದು ಕಾದು ನನ್ನ ಸಹನೆ ಸತ್ತಿತ್ತು. ಕೊನೆಗೆ ನನ್ನ ನಿರೀಕ್ಷೆಯಂತೆ ಬಂದ್ಲು. ಹಿಂದಿನಂತಲ್ಲ... ಮದುವಣಗಿತ್ತಿಯ ಹಾಗೆ ಅಲಂಕರಿಸಿಕೊಂಡು ಬಂದಿದ್ಲು... ಅಷ್ಟೇ ವೇಗವಾಗಿ ಮಾಯವಾದ್ಲು!'

'ಅದು ಹೇಗೆ ಸಾಧ್ಯ? ನೀವಿಬ್ಬರೂ ಓಡಿ ಹೋಗೋ ತಯಾರಿ ನಡೆಸಿದ್ದೀರಿ ಅನ್ನುತ್ತೆ?' ಅನುಮಾನ ಪ್ರಕಟಿಸಿದ ಪಾಂಬು.

'ಆ ದಿನ ಅವಳ ದೂರದ ಸಂಬಂಧಿಯೊಬ್ಬ ಹಿಂಬಾಲಿಸಿಕೊಂಡು ಬರ್ತಿದ್ದಾನೇಂತ ನಂಗೆ ಸುಳಿವು ಕೊಟ್ಲು. ನಾನು ಅವಳು ಅಪರಿಚಿತರಂತೆ ಇರೋಣಾಂತ ಸೂಚನೆ ಕೊಟ್ಟು ನೇರವಾಗಿ `ಬಂಡೆ'ಯ ಕಡೆಗೆ ನಡೆದ್ಲು. ನಾನು ಹಿಂಬಾಲಿಸುವಂತಿರಲಿಲ್ಲ. ಆದರೆ ಎಷ್ಟು ಹೊತ್ತಾದರೂ ಅವಳು ಬರೋ ಸೂಚನೆ ಕಾಣ್ಲಿಲ್ಲ. ನಂಗೆ ಹೆದರಿಕೆಯಾಯ್ತು. ಅರ್ಧ ಗಂಟೆ ಬಿಟ್ಟು ನಾನು ಅವಳು ಹೋದ ದಾರಿಯಲ್ಲಿಯೇ ಮುನ್ನಡೆದೆ. ದಾರಿ ಸವೆಯಿತೇ ವಿನಹ ಅವ್ಳೇನು ಸಿಗುವ ಹಾಗೆ ಕಾಣಿಸಲಿಲ್ಲ. ಕೊನೆಗೆ ಅದೇ ದಾರಿಯಿಂದ ಹಿಂತಿರುಗಿದೆ. ಆಗ ಬೆಳಕು ಕಡಿಮೆಯಾಗಿ ದೋಣಿಗಳೆಲ್ಲಾ ದಡ ಸೇರೋ ಹೊತ್ತು...' ಪಾಂಬು ಹಿತೇಶನ ಮಾತನ್ನು ತಡೆದ.

'ನಿಲ್ಲು, ನೀನು ಏನಂದೆ? ಆ ದಿನ ಅವಳು ಬಹಳ ಬೇಗನೆ ದಿಣ್ಣೆಗೆ ಬರ್ತೀನಿ ಅಂದಿದ್ದಲ್ವ? ಆದ್ರೆನೀನು ಹೇಳ್ತಾ ಇರೋದೇನು, ದೋಣಿಗಳೆಲ್ಲಾ ದಡ ಸೇರೋ ಹೊತ್ತು ಅಂದ್ರೆ... ಅದು ಸಾಯಂಕಾಲ?'

'ಹೌದು ಪಾಂಬು, ಅವಳು ನಾನು ಭೇಟಿಯಾಗ್ತಿದ್ದದ್ದು ಸಂಜೆ ಹೊತ್ತು. ದೀಪಸ್ತಂಭದ ಬೆಳಕು ಸಮುದ್ರದ ನೀರಿಗೆ ಬೀಳೋವರೆಗೂ ನಾವಿಬ್ರೂ ಮರಳು ದಿಣ್ಣೆಯೇರಿ ಕುಳಿತಿರುತಿದ್ವಿ. ಅನಂತರ ನಾನೇ ಅವಳನ್ನು ಕಾರಿನವರೆಗೂ ಕರೆದೊಯ್ಯುತ್ತಿದ್ದೆ'

'ಆಗ ಡ್ರೈವರ್ ನಿನ್ನನ್ನು ಗುರುತಿಸಲಿಲ್ವೆ?'

'ಇಲ್ಲ, ಅವ್ನು ನನ್ನ ಗಮನಿಸದ ಹಾಗೆ ಎಚ್ಚರವಹಿಸ್ತಿದ್ದೆ. ಇದಕ್ಕೆ ಲಹರಿಯ ಬೆಂಬಲವೂ ಇತ್ತು'

'ಅದು ಹೇಗೆ ಸಾಧ್ಯ?'

'ಅವಳು ಡ್ರೈವರ್ ಜೊತೆಗೆ ಒಪ್ಪಂದ ಮಾಡಿಕೊಂಡಿದ್ಲು. ಅವನಿಗೇನು ಶ್ರೀಮಂತರ ಉಸಾಬರಿ. ಅವ್ನು ಆಕೆ ಹೇಳಿದಂತೆ ಕೇಳ್ತಿದ್ನೇ ಹೊರ್ತು ಅನಗತ್ಯ ಬೇರೆ ವಿಷಯಕ್ಕೆ ತಲೆಕೆಡಿಸಿಕೊಳ್ಳದ ನಿಯತ್ತಿನ ಮನುಷ್ಯ. ಅವ್ನ ಬಗ್ಗೆ ಲಹರಿ ಯಾವಾಗ್ಲೂ ಮೆಚ್ಚುಗೆ ವ್ಯಕ್ತಪಡಿಸ್ತಿದ್ಲು'

'ಅವನನ್ನು ನೀನು ಒಮ್ಮೆಯಾದರೂ ನೋಡ್ಲಿಲ್ವೇ?'

ಹಿತೇಶ ನೆನಪಿಗೆ ತಂದುಕೊಂಡ.

'ಹೌದು, ನೋಡಿದ್ದೇನೆ. ಬಹಳ ಸ್ವಾಭಿಮಾನಿ ಮತ್ತು ನಿಯತ್ತಿನ ವ್ಯಕ್ತಿ ಅನ್ನುವ ಹಾಗಿದ್ದ. ತಾನಾಯಿತು ತನ್ನ ಕೆಲಸವಾಯಿತು ಅನ್ನೋ ತರಹ ಬಹಳ ಸ್ವಾಭಿಮಾನದ ಸಾಧು ಮನುಷ್ಯ'

'ಅದು ಸರಿ, ಲಹರಿ ಕಾಣೆಯಾದ ಮೇಲೆ ನೀನೇನು ಮಾಡಿದೆ?'

'ನಿಂಗೆ ಗೊತ್ತೇ ಇದೆಯಲ್ಲಾ. ಆ ದಿನ ರಾತ್ರಿ ಮರಳು ದಿಣ್ಣೆಯಲ್ಲಿಯೇ ಇದ್ದು ಅವಳನ್ನು ಹುಡುಕಾಡಿದೆ. ಪ್ರತಿಯೊಂದು ಅಲೆಯಲ್ಲೂ ಅವಳನ್ನು ನೋಡ್ತಿದ್ದೆ. ಫಲಿತಾಂಶ ಮಾತ್ರ ಶೂನ್ಯ. ಲಹರಿ ನನ್ನಿಂದ ದೂರ ಆದ್ಲು ಅನ್ನೋದನ್ನು ನಂಬೋಕು ಆಗ್ತಿಲ್ಲ. ಒಂದಲ್ಲ ಒಂದು ದಿನ ನಾನವಳನ್ನು ಪತ್ತೆ ಹಚ್ಚೇ ಹಚ್ಚೇನಿ ಅನ್ನೋ ಭರವಸೆ ನನಗಿದೆ' ದುಃಖತಪ್ತನಾದ ಹಿತೇಶ ಅಲ್ಲಿಯೇ ಕುಕ್ಕರಿಸಿದ.

'ಸಮಾಧಾನ ಮಾಡ್ಕೋ. ಅವಳು ನಿಂಗೆ ಸಿಕ್ಕೇ ಸಿಗ್ತಾಳೆ' ಆಶಾವಾದವನ್ನು ಪ್ರಕಟಿಸಿದ.

ಹಿತೇಶ ತಲೆಯೆತ್ತಿ ನೋಡಿದ. ಪಾಂಬು ಎಲ್ಲೂ ಕಾಣಿಸಲಿಲ್ಲ. ಆರಡಿ ಎತ್ತರದ ಆಜಾನುಬಾಹು ವ್ಯಕ್ತಿ ಅವನ ಬಳಿ ಬಂದು ನಿಂತಿದ್ದ. ಸೂರ್ಯನ ಬೆಳಕಿನಲ್ಲಿ ಅವನ ಮುಖ ಸರಿಯಾಗಿ ಕಾಣಿಸಲಿಲ್ಲ. ಹಿತೇಶ ಎದ್ದು ನಿಂತ.

****

**(ಸಶೇಷ)**